ಕೇಳುತ್ತಿದ್ದೇನೆ.

ಶ್ರೀ ಎಂ.ವೈ.ಘೋರ್ಪಡೆ: ಮಾನ್ಯ ಅಧ್ಯಕ್ಷರೇ ಶ್ರೀಮತಿ ಇಂದಿರಾಗಾಂಧಿಯವರ ಕಾಲದಿಂದ ಈ ಹೊಗೆರಹಿತ ಒಲೆಗಳ ಬಗ್ಗೆ ಎಲ್ಲರೂ ಮಾತನಾಡುತ್ತಾ ಬಂದಿದ್ದೇವೆ. ಅದಕ್ಕೆ ಹಣದ ಅಭಾವ ಇಲ್ಲ. ಅದಕ್ಕೆ ಜಾಸ್ತಿ ಹಣ ಬೇಕಾಗುವುದಿಲ್ಲ. ಒಂದು ಸಾಮೂಹಿಕವಾದಂಥ ಪ್ರಯತ್ನ ಹಳ್ಳಿಯಲ್ಲಿ ನಡೆಯಬೇಕಾಗುತ್ತದೆ. ಆ ರೀತಿ ಸ್ವಚ್ಚಗ್ರಾಮ ಎಂದು ನಾವು ತೆಗೆದುಕೊಂಡರೆ ಅಂತಹ ಒಂದು ಪ್ರಯತ್ನ ಎಲ್ಲರೂ ಸೇರಿ ಮಾಡುವುದಕ್ಕೆ ಒಂದು ಹೊಸ ಪರಿವರ್ತನೆಯನ್ನು ನಾವು ನಡೆಸಬೇಕಾಗುತ್ತದೆ. ಇಲ್ಲದೇ ಹೋದರೆ ಗ್ರಾಮಗಳು ಹಾಗೆಯೇ ಉಳಿಯುತ್ತವೆ ಮತ್ತು ಜನರಿಗೆ ಮುಟ್ಟವುದಿಲ್ಲ.

ಚಳ್ಳಕೆರೆ ಆಸ್ಪತ್ರೆಗೆ ದಂತ ವೈದ್ಯರ ನೇಮಕ.

315(3068)

ಶ್ರೀ ಬಸವರಾಜ್ ಮಂಡಿಮಠ.ಜಿ.(ಚಳ್ಳಕೆರೆ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಳ್ಳಕೆರೆ ಆಸ್ಪತ್ರೆಯಲ್ಲಿ ಎಂದಿನಿಂದ ಡೆಂಟಿಸ್ಟ್ ಹುದ್ದೆ ಖಾಲಿ ಇದೆ.

ಆ) ಸದರಿ ಹುದ್ದೆ ಭರ್ತಿ ಮಾಡಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಇ) ಆಸ್ಪತ್ರೆ ಮುಂದಿನ ಆವರಣದಲ್ಲಿ ಸ್ವಚ್ಚತೆ ಕಾಪಾಡುವ ದೃಷ್ಟಿಯಿಂದ ಡಾಂಬರೀಕರಣ ಮಾಡಲು ಸರ್ಕಾರ ಇಚ್ಚಿಸುತ್ತಿದೆಯೇ?

ಈ) ಹಾಗಿದ್ದಲ್ಲಿ ಎಂದು ಡಾಂಬರಿಕರಣ ಮಾಡಲಾಗುವುದು?

ಡಾ:ಎ.ಬಿ.ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) 7 ವರ್ಷಗಳಿಂದ ಖಾಲಿ ಇದೆ.

ಆ) ಸಹಾಯಕ ದಂತ ಶಸ್ತ್ರ ಚಿಕಿತ್ಸಕರ ಹುದ್ದೆಗಳು ನೇರ ನೇಮಕಾತಿ ಮುಖಾಂತರ ತುಂಬಲು ಆದೇಶಿಸಿರುತ್ತದೆ. ಪ್ರಕ್ರಿಯೆ ಪೂರ್ಣಗೊಂಡ ನಂತರ ಖಾಲಿ ಇರುವ ವೈದ್ಯರ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಇ) ಹೌದು

ಈ) ಕರ್ನಾಟಕ ಆರೋಗ್ಯ ಪದ್ಧತಿಗಳ ಅಭಿವೃದ್ಧಿ ಯೋಜನೆಯಡಿ ಆಸ್ಪತ್ರೆಯ ಆಂತರಿಕ ರಸ್ತೆಗಳ ನಿರ್ಮಾಣ ಮತ್ತು ಡಾಂಬರೀಕರಣವನ್ನು ರೂ.2.43 ಲಕ್ಷ ವೆಚ್ಚದಲ್ಲಿ ಕೈಗೆತ್ತಿಕೊಳ್ಳಲಾಗಿದೆ.

ಶ್ರೀ ಜಿ.ಬಸವರಾಜು ಮಂಡಿಮಠ್: ನನ್ನ ತಾಲ್ಲೂಕಿನಲ್ಲಿ ಡೆಂಟಿಸ್ಟ್ ಹುದ್ದೆ ಖಾಲಿ ಇದೆ, ಇದರಿಂದ ತಾಲ್ಲೂಕಿನಲ್ಲಿ ಇರುವಂಥ ರೋಗಿಗಳ ಶೋಷಣೆಯಾಗುತ್ತಿದೆ. ದಂತಚಿಕಿತ್ಸಕರ ಹುದ್ದೆಗಳನ್ನು ನೇಮಕಾತಿ ಮುಖಾಂತರ ಭರ್ತಿಮಾಡಲಾಗುವುದು ಎಂದು ಸಚಿವರು ಉತ್ತರದಲ್ಲಿ ಹೇಳಿದ್ದಾರೆ. ಇದು ಏಳಂಬವಾಗಬಹುದೇನೋ. ದಯಮಾಡಿ ತಕ್ಷಣ ಬೇರೆ ಕಡೆಯಿಂದ ಈ ಆಸ್ಪತ್ರೆಗೆ ಡೆಂಟಿಸ್ಟ್‌ನ್ನು ನೇಮಕ ಮಾಡಬೇಕು ಅಥವಾ ವರ್ಗಾವಣೆ ಮಾಡಬೇಕೆಂದು ವಿನಂತಿಸುತ್ತೇನೆ. ಇದಕ್ಕೆ ಮಾನ್ಯ ಸಚಿವರು ಉತ್ತರ ಹೇಳಬೇಕು.

ಡಾ: ಎ.ಬಿ. ಮಾಲಕರೆಡ್ಡಿ: ಸನ್ಮಾನ್ಯ ಅಧ್ಯಕ್ಷರೇ, ಯಾವರೀತಿ ಸಾಮಾನ್ಯ ವೈದ್ಯರ ಕೊರತೆ ಇದೆ, ಅದೇರೀತಿ ದಂತ ಚಿಕಿತ್ಸಕ ವೈದ್ಯರ ಕೊರತೆಯೂ ಸಾಕಷ್ಟು ಇದೆ. ರಾಜ್ಯದಲ್ಲಿ ಈಗಾಗಲೇ 120 ಪೋಸ್ಟ್‌ಗಳು ಖಾಲಿ ಇವೆ. ಬೇರೆ ಕಡೆಯಿಂದ ವರ್ಗಾವಣೆ ಮಾಡಿಕೊಡುವ ಪ್ರಶ್ನೆ ಸಧ್ಯಕ್ಕೆ ಬರುವುದಿಲ್ಲ. ಆದರೆ ಹುದ್ದೆಗಳನ್ನು ಭರ್ತಿ ಮಾಡುವ ಪ್ರೋಸೆಸ್ ನಡೆದಿದೆ. ಈಗಾಗಲೇ ಸೂಚನೆಗಳನ್ನು ಕೊಟ್ಟಿದ್ದೇವೆ. ನನ್ನ ಅಂದಾಜಿನ ಪ್ರಕಾರ ಇನ್ನು ಎರಡು ತಿಂಗಳಲ್ಲಿ ನಿಮ್ಮ ಸಮಸ್ಯೆಗೆ ಪರಿಹಾರ ಸಿಗಬಹುದು.

ಶ್ರೀ ಅಮರೇಗೌಡ ಬಯ್ಯಾಪುರ ಲಿಂಗನಗೌಡ: ಪ್ರೋಸಸ್ ನಡೆದು ಒಂದು ವರ್ಷವಾಯಿತು. ನೇರ ನೇಮಕಾತಿಯಲ್ಲಿ ಪ್ರೋಸೆಸ್ ನಡೆದಿದೆ ಎಂದರೆ, ಮೆರಿಟ್ ಆಧಾರದ ಮೇಲೆ ಮತ್ತು ರೋಸ್ಟರ್ ಪ್ರಕಾರ ಮಾಡುತ್ತೀರಿ. ಇದು ಏಳಂಬವಾದರೆ ತೊಂದರೆಯಾಗುತ್ತದೆ. ತಾವೇ ಹೇಳಿದಂತೆ 120 ಪೋಸ್ಟ್‌ಗಳು ಖಾಲಿ ಇರುವುದರಿಂದ ಎಲ್ಲ ತಾಲ್ಲೂಕುಗಳಲ್ಲೂ ಈ ಪರಿಸ್ಥಿತಿ ನಿರ್ಮಾಣವಾಗಿದೆ. ತಾವು ಮನಸ್ಸು ಮಾಡಿದರೆ ಕೆಲವು ದಿವಸಗಳಲ್ಲೇ ಇದನ್ನು ಪರಿಹಾರ ಮಾಡಬಹುದು. ಕೂಡಲೇ ಇದನ್ನು ಮಾಡಿಕೊಡಬೇಕೆಂದು ಹೇಳುತ್ತೇನೆ.

ಡಾ:ಎ.ಬಿ.ಮಾಲಕರೆಡ್ಡಿ: ನಾನು ವಿಷದವಾಗಿ ಹೇಳುವುದಕ್ಕೆ ಬಯಸಲಿಲ್ಲ. ಈ ಫೈಲು ಲಾ ಡಿಪಾರ್ಟ್‌ಮೆಂಟ್‌ನಲ್ಲಿದೆ. ಇವತ್ತು ಲಾ ಸೆಕ್ರೆಟರಿಯವರನ್ನು ಕರೆಸಿ ನಾನು ಮಾತನಾಡಿದ್ದೇನೆ. ಅದಷ್ಟು ಬೇಗ, ಇನ್ನು ಮೂರು-ನಾಲ್ಕು ದಿನಗಳಲ್ಲಿ ಲಾ ಡಿಪಾರ್ಟ್‌ಮೆಂಟ್‌ನಿಂದ ನಮ್ಮ ಇಲಾಖೆಗೆ ಬಂದ ಮೇಲೆ ಪ್ರೋಸೆಸ್ ಪ್ರಾರಂಭವಾಗುತ್ತದೆ.

ಅಧ್ಯಕ್ಷರು: ಇನ್ನು ಐದು ನಿಮಿಷ ಇದೆ.

ಶ್ರೀ ಗುಂಡಪ್ಪ ವಕೀಲ್: ಬೀದರ್ ಜಿಲ್ಲೆಯ ಔರಾದ್ ತಾಲ್ಲೂಕಿನ ತೋರಣ ಗ್ರಾಮದಲ್ಲಿ ಒಂದು ಆಸ್ಪತ್ರೆ ಇದೆ. ಅಲ್ಲಿ ಯಾವುದೇ ಸ್ಟಾಫ್ ಇಲ್ಲ. ಡಾಕ್ಟರ್‌ಗಳಿಲ್ಲ, ನರ್ಸ್‌ಗಳಿಲ್ಲ.....

ಅಧ್ಯಕ್ಷರು: ಇದಕ್ಕೆ ಪ್ರತ್ಯೇಕ ಪ್ರಶ್ನೆ ಕೇಳಿ.

ಶ್ರೀ ಗುಂಡಪ್ಪ ವಕೀಲ್: ಇದೇ ವಿಷಯಕ್ಕೆ ಸಂಬಂಧಪಟ್ಟ ಹಾಗೆ ಉಪಪ್ರಶ್ನೆ. ಬೀದರ್ ಜಿಲ್ಲೆಯ ಔರಾದ್ ತಾಲ್ಲೂಕಿನ ತೋರಣ ಗ್ರಾಮದಲ್ಲಿ ಮೂರು ವರ್ಷಗಳ ಹಿಂದೆ ದವಾಖಾನೆ ಉದ್ಘಾಟನೆಯಾಯಿತು. ಆದರೆ ಇಲ್ಲಿಯವರೆಗೆ ಅಲ್ಲಿ ಯಾವುದೇ ಸ್ಟಾಫ್‌ನ್ನು ಕೊಟ್ಟಿಲ್ಲ. ಡಾಕ್ಟರ್ ಇಲ್ಲದ ಕಾರಣ ಅದನ್ನು ಮುಚ್ಚಿದ್ದಾರೆ. ಸ್ವಲ್ಪ ಅದರ ಬಗ್ಗೆ ಏನಾದರೂ ಕ್ರಮ ತೆಗೆದುಕೊಳ್ಳುತ್ತೀರಾ?

ಡಾ: ಎ.ಬಿ.ಮಾಲಕರೆಡ್ಡಿ: ಈಗಾಗಲೇ ಸದನಕ್ಕೆ ನಾನು ಅನೇಕ ಸಲ ತಿಳಿಸಿದ್ದೇನೆ. 573 ಮಂದಿ ಡಾಕ್ಟರ್‌ಗಳ ಆಯ್ಕೆಗೆ ಪ್ರೊಸೆಸ್ ನಡೆದಿದೆ. ಈಗಾಗಲೇ 150 ಸರ್ಟಿಫಿಕೇಟ್ಸ್ ವೆರಿಫೈ ಆಗಿ ಬಂದಿವೆ. ಉಳಿದದ್ದು ಬರಲಿ ಬಿಡಲಿ ನಾವು ಇನ್ನು ಒಂದು ವಾರದಲ್ಲಿ ಅಥವಾ ಏಂಟು-ಹತ್ತು ದಿವಸಗಳಲ್ಲಿ ಈ ನೇಮಕಾತಿ ಮಾಡತಕ್ಕಂಥ ಪ್ರಕ್ರಿಯೆಯನ್ನು ಪೂರ್ತಿಗೊಳಿಸುತ್ತೇವೆ.

ಅಧ್ಯಕ್ಷರು: ಪ್ರಶ್ನೋತ್ತರ ವೇಳೆಯಲ್ಲಿ ಸದಸ್ಯರು ಮಂತ್ರಿಗಳ ಹತ್ತಿರ ಬರಬೇಡಿ. ತಡೆಹಿಡಿಯಲಾದ ಪ್ರಶ್ನೆ.

ಸಿಂಧನೂರು ತಾಲ್ಲೂಕಿನಲ್ಲಿರುವ ಪದವಿ ಪೂರ್ವ ವಿದ್ಯಾಲಯ.

113(1138)

ಶ್ರೀ ಹಂಪನಗೌಡ ಬಾದರ್ಲಿ(ಸಿಂಧನೂರು): ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಿಂಧನೂರು ತಾಲ್ಲೂಕಿನಲ್ಲಿ ಪದವಿ ಪೂರ್ವ ವಿದ್ಯಾಲಯಗಳ ಸಂಖ್ಯೆ ಎಷ್ಟು? ಅಭ್ಯಾಸ ಮಾಡುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು? ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಪದವಿಪೂರ್ವ ಕಾಲೇಜುಗಳು ತಾಲ್ಲೂಕಿನಲ್ಲಿ ಇವೆಯೇ?

ಆ) ಸಿಂಧನೂರು ತಾಲ್ಲೂಕಿನಲ್ಲಿ ಬರುವ ಪದವಿ ಪೂರ್ವ ಕಾಲೇಜುಗಳಲ್ಲಿ ಉಪನ್ಯಾಸಕರ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ತೆಗೆದುಕೊಂಡ ಕ್ರಮಗಳೇನು?